

ಹನಿಗಳು. ರಕ್ತವನ್ನೇ ಬೆವರಾಗಿಸುತ್ತಿರುವ ದೈವವೇ! ನನ್ನ ಕಂದಮ್ಮನನ್ನು ಕಾಪಾಡು. ಅದರ ಜೀವ ಉಳಿಸು. ತಾನು ನಿನಗೇನನ್ನೂ ಕೇಳಿಲ್ಲ. ಕೇಳುವುದೂ ಇಲ್ಲ. ನಾನೊಬ್ಬ ನಿರೀಶ್ವರಿಯಾದರೂ ನಿನ್ನಲ್ಲಿ ಮಾತ್ರ ನಂಬಿಕೆ ಇಟ್ಟಿರುವೆ. ಕಾರಣ ಈ ಗುಡಿಗುಂಡಾರಗಳ ಕಲ್ಲು ಮಣ್ಣಲ್ಲಿ ಬೆಳೆದಿರುವೆ. ನಿನ್ನ ಅನ್ನ ಉಂಡಿರುವೆ. ನೀ ಈ ನೆಲದ ದೈವ. ಆದಕಾರಣ ನಿನ್ನಲ್ಲಿ ಗಳಗಳಿಸಿ ಕೇಳುವೆ. ನನ್ನ ಕಂದವ್ವಳ ಜೀವ ನಿನ್ನ ಕೈಯಲ್ಲಿ ದೈವವೆ! ಪ್ರಾಣ ಭಿಕ್ಷೆ ನೀಡು.' ನಿತ್ಯ ಚಾಕರಿಯಲ್ಲಿ ಆತ ಹೀಗೆ ಮನದಲ್ಲಿ ಉಸುರುತ್ತಿದ್ದ. ಹೀಗೆಯೇ ನೆಮ್ಮದಿ ಶೋಧಿಸುತ್ತಾ ಆತಂಕದ ಕ್ಷಣಗಳು ಆರುತ್ತಲಿದ್ದವು.

ಒಂದು ನಸುಕು. ನಸುಕಿನ ನಿದ್ದೆಯ ಮಂಪರೋ . ಅರೆಗಣ್ಣೋ ಮರೆಗಣ್ಣೋ! ಎಂಬ ರಾಮಗೊಂಡನ ಸ್ಥಿತಿ. ಆತ ಎದ್ದ. ರಾತ್ರಿ ಚಾಕರಿ ಮುಗಿಸಿ ಹನ್ನೆರಡು ಗಂಟೆಗೆ ಬಂದು ಮಲಗಿದ್ದ. ಬಂದಾಗ ಎಲ್ಲರೂ ಮಲಗಿದ್ದರು. ನಸುಕಲ್ಲಿ ಆತನ ತಂಗಿ ಶಾರಕ್ಕ ಎಂದಿನಂತೆ ಎದ್ದಿದ್ದಳು. ಬೆಳಗಿನ ಪೂಜೆಯ ನಂತರ ಗುಡಿಯಲ್ಲಿರುವವರಿಗೆ ಚಹಾ ಕಳಿಸಲು ಚಹಾಕ್ಕೆ ನೀರಿನ ಎಸರು ಇಟ್ಟಿದ್ದಳು. ಸುನೀತಾ ಎದ್ದಿದ್ದಳು. ಅವಳ ಮುಖ ಬಾಡಿತ್ತು. ತನ್ನ ತೇವಗೊಂಡ ಕಣ್ಣಗಳನ್ನು ರಾಮಗೊಂಡ ಎದುರಿಸಲಾರನೆಂದು ಮುಚ್ಚುವ ಯತ್ನದಲ್ಲಿದ್ದಳು. ಇವರಿಬ್ಬರೂ ತನ್ನಿಂದ ಏನೋ